



ಜೋಪಾನವಾಗಿ ಇಡುತ್ತಿದ್ದೆವು. ಬಾಟಲಿ ಹೆಚ್ಚು ಸಂಗ್ರಹವಾದಂತೆ ಹೆಚ್ಚೆಚ್ಚು ಸಂತೋಷವಾಗುತ್ತಿತ್ತು. ಖಾಲಿಯಾದ ಬಾಟಲಿಗಳು ಬಹುಮಾನದಂತೆ ನಮ್ಮ ಕೈ ಸೇರುತ್ತಿದ್ದವು. ಒಮ್ಮೊಮ್ಮೆ ರಾತ್ರಿ ಐಸ್‌ಕ್ರೀಮ್‌ನ ಕನಸುಗಳು ಬೀಳುತ್ತಿದ್ದವು. ಬಾಟಲಿ ಇಲ್ಲದಿದ್ದರೆ ಎಂಟಾಣೆ ಕೊಡಬೇಕಿತ್ತು. ಎಂಟಾಣೆಗೆ ಕೈಯೊಡ್ಡುವುದಕ್ಕಿಂತ ಬಾಟಲಿಯೇ ಲೇಸು ಎನಿಸುತ್ತಿತ್ತು.

ಶಂಕ್ರುಗೌಡ್ರು ನಮ್ಮ ಮನೆಗೆ ಬಂದರೆ ಖುಷಿ. ಅವರಿಗೆ ಯಾವುದೋ ಬ್ಯಾನೀ. ಡಾಕ್ಟರೇ ಹೇಳಿದ್ದರಂತೆ.. ಅದಕ್ಕಾಗಿ ಕದ್ದು ಕುಡಿಯಲೆಂದೇ ಅವರು ಮನೆಗೆ ಬರುತ್ತಿದ್ದದ್ದು. ಖಾಲಿ ಬಾಟ್ಲಿಯೊಂದಿಗೆ ರೂಪಾಯಿ ಎಂಟಾಣೆ ಕೈಸೇರುತ್ತಿತ್ತು. ಗೆಳೆಯರ ಹತ್ತಿರ ..ಗೌಡ್ರು ನಮ್ ಮನ್ಯಾಗ ಚಾ ಕುಡಿತಾರ ಗೊತ್ತಾ..ಅಂತ ಹೇಳಿ ಬೀಗುತ್ತಿದ್ದೆ.

ಬಿಲ್ಲಪ್ಪ ನಮ್ಮ ಕೇರಿಗೆ ಮೊದಲು ಬರುತ್ತಿದ್ದದ್ದು ಅವನು ನಮ್ಮ ಜಾತಿಯವ ಅಂತಲೇವ ತಿಳಿದಿದ್ದೆವು. ಅವನು ನಮ್ಮನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದ. ಸಾಲಿಗೆ ಹೋಗ್ಬೇಕು.. ಶ್ಯಾಣಾರ ಆಗ್ಬೇಕು..ಅಂತ ಬುದ್ಧಿ ಹೇಳಿ ಪುಡಿ ಐಸ್‌ನ ಪುಕ್ಕಟೆ ಹಂಚುತ್ತಿದ್ದ. ಊರೆಲ್ಲ ತಿರುಗಾಡಿ ಉಳಿದ ಐಸ್ ಪುಡಿ ನಮ್ಮ ಪಾಲಿನದು. ಗಾಳೆಮ್ಮ ಗುಡಿ ಕಟ್ಟೆ ಮೇಲೆ ಕುಳಿತು ಚುಟ್ಟಾ ಹಚ್ಚಿ ಧಂ.. ಎಳೆಯುತ್ತಿದ್ದ. ಸುರುಳಿ ಸುರುಳಿಯಾಗಿ ಬಿಡುವ ಹೊಗೆಯನ್ನು ನಾವು ಹಾರಾಡಿ ಹಿಡಿಯುವ ಪ್ರಯತ್ನ ಮಾಡುತ್ತಿದ್ದೆವು. ಹೊಗೆ ಯಾರ ಕೈಗೂ ಸಿಗುತ್ತಿರಲಿಲ್ಲ. ನಾವು ಹಿಡಿಯುವುದನ್ನು ಬಿಡುತ್ತಿರಲಿಲ್ಲ. ಬಿಲ್ಲಪ್ಪ ನಮ್ಮನ್ನು ಕಂಡು ನಗುತ್ತಿದ್ದ. 'ಲೇ ಹುಡ್ರಾ ಹಿಡೆದನ್ನ ಬಿಡಬ್ಯಾಡ್ರೀ..ಆದ್ರ ಸಿಗದ್ದನ್ನ ಮಾತ್ರ ಹಿಡಿಬೇಕ..ಗೊತ್ತಾತ ಮಕ್ಕಳ್ರ್ಯಾ..' ಮತ್ತೆ ಪುಸ್ಸ ಅಂತ ಹೊಗೆ ಬಿಡುತ್ತಿದ್ದ.

ನಮ್ಮನ್ನು ಸುತ್ತ ಕೂಡಿಸಿಕೊಂಡು ..'ಲೇ ಹುಡ್ರಾ..ನಾವ ಮುಂದ ಬರ್ಬೇಕಂದ್ರ ಸಾಲಿ ಕಲಿಬೇಕ. ಎಲ್ಲರಂಗ ಮರ್ವಾದಿ ಸಿಗಬೇಕಂದ್ರ ಕುಡಿತೆಲಿ ಮದಲ್ ಬಿಡಬೇಕ, ನಿಮ್ಮ ಅಪ್ಪ ಕಾಕಾ ದೊಡ್ಡಪ್ಪ ಅವರನ್ನ ಕುಡೇದ ಬಿಡಸ್ರೀ..ಮಕ್ಳ ಹಟಾ ಮಾಡಿದ್ರ ಬೇಡಕ್ಯೆಂಡ್ರ ಎಂತಾ ಕಟಕರ್ರು ಬಿಡ್ತಾರ. ನಾಳೀಂದ ಆಟ್ ಮಾಡ್ಬೇಕ ಮತ್ತ.' ಬಿಲ್ಲಪ್ಪ ತನ್ನ ಮಾತು ಕಾಳಜಿಯಿಂದ ನಮ್ಮ ಎದೆಯಲ್ಲಿ ಸ್ಥಾನ ಪಡೆದುಕೊಂಡಿದ್ದ.

'ಲೇ ತಮ್ಮಾ ನಿಮಗ ಗೊತ್ತೈತೇನು ಮೊನ್ನೆ ಹೊಸಾ ಗುಡಿ ಕಟ್ಸಾಕ ಈಳಗೇರ ಗಂಗಣ್ಣ ಸಾವ್ಕಾರ ಎಮ್ಮೆಲ್ಲರಕಿಂತ ಹೆಚ್ಚ ರೊಕ್ಕಾ ಕೊಟ್ಟಾನ.'. ಈ ವಿಷಯ ಕೇರಿಯ ಎಲ್ಲರ ಬಾಯಲ್ಲಿ ಗುಣಗಾನದಂತೆ ಸ್ತುತಿಸಲ್ಪಟ್ಟಿದ್ದನ್ನು ನಾವು ಕೇಳಿದ್ದೆವು. ಬಿಲ್ಲಪ್ಪನ ಮಾತಿಗೆ ನಾವು ಹೌದೌದು ಎಂದು ತಲೆ ಹಾಕಿದೆವು.

'ಗಂಗಣ್ಣ ಯೇನ ಜಾತಿಯಂವಾ ಅವನು.. ಎಲೆಕ್ಸನ್ನ ನಿಲ್ಲಾಕತ್ಯಾನನು.. ಇಲ್ಲ ಹೌದಿಲ್ಲ. ಹಂಗಾರ ಯಾಕ ಕೊಟ್ಟ..? ಅಂವಗ ಆಟ ಕೇರಿಯಿಂದ ಲಾಭ ಐತಿ. ನಮ್ಮ ಮಂದಿ ಕುಡದಿದ್ರಾಗ ಲಾಭಾ ಮಾಡಿಕೊಂಡಿದ್ರಾಗ ತಟಗ ಕೊಟ್ಟಾನ ಅಟ..' ಬಿಲ್ಲಪ್ಪ ಹೇಳುವುದು ನಿಜ ಎನಿಸಿತು. ಅವನು ಮಾಸ್ತರರಕಿಂತ ತಿಳಿಯುವ ಹಾಗೆ ಬಿಡಿಬಿಡಿಸಿ ಹೇಳುತ್ತಿದ್ದ.

'ಲೇ ಅಲ್ನೋಡ್ರಿ... ಅಂತ ಸೈಕಲ್ ಕಡೆಗೆ ಬೊಟ್ಟು ಮಾಡಿ ತೋರಿಸಿ ...ಹಿಂದ ಕ್ಯಾರಿಯರ್‌ಗೆ ಹಾಕಿ ಕಟ್ಟೇನಲ್ಲ ಆ ಚೀಲದನ ಬಾಟ್ಲೀ ಎಲ್ಲಾ ನಿಮ್ಮವು. ಈ ಕಿಸೆದಾಗಿನ ಜಣ್ಣ ಜಣ್ಣ ರೊಕ್ಕ ಊರಾನ ಹುಡ್ರುವು' ತುಂಬಿದ ಕಿಸೆ ತೋರಿಸಿದ. ನಮಗೆ ಹಂಗಿಸಿದಂತಾಯಿತು.

'ತಮ್ಮಾ ನನ್ನ  ನೋಡ್ರಿ ಜೀವನದಾಗ ಒಮ್ಮೀ ಬಾಯಿಗೆ ಹಚ್ಚಿಲ್ಲ. ನೋಡ್ರೆಪಾ ನಾ ನಿಮ್ಮ ಕೈಯಾಗ ಬಾಟ್ಲೀ ಬದ್ಲಿ ಎಂಟಾಣೆ ನೋಡ್ಬೇಕು..ಅಟ' ಬಿಲ್ಲಪ್ಪ ಕನಸು ಬಿತ್ತಿ ಹೊರಟು ಹೋಗುತ್ತಿದ್ದ.

ಬಿಲ್ಲಪ್ಪನ ಮಾತಿನಂತೆ ಪ್ರಯತ್ನ ಮಾಡಿ ಸೋಲುತ್ತಿದ್ದೆವು. ನಶೆಯಲ್ಲಿ 'ಹ್ಲೂಂ ಮಕ್ಳಾ ನೀವ್ ಹ್ಯೇಳ್ದಂಗಾ ಆಗಲಿ' ಅನ್ನುತ್ತಿದ್ದ ಅಪ್ಪ ಕಾಕಂದಿರು. ಮುಂಜಾನೆ ಮರೆತು ಬಿಡುತ್ತಿದ್ದರು. ಮರುದಿನ ಮತ್ತೆ ಬಾಟಲಿ ಹಿಡಿದು ಓಡುತ್ತಿದ್ದೆವು. ಬಿಲ್ಲಪ್ಪ ಹೇಳುವ ಕಾಯಕ ಬಿಡಲಿಲ್ಲ. ನಾವೂ ಮನವೊಲಿಸುವುದನ್ನು ಬಿಡಲಿಲ್ಲ. ಹಾಗೆ ಅಪ್ಪಂದಿರು..

ಕೆಲ ದಿನಗಳ ನಂತರ ಬಿಲ್ಲಪ್ಪ ಊರಿಗೆ ಬರುವುದನ್ನು ನಿಲ್ಲಿಸಿದ. ಐಸ್ ಫ್ಯಾಕ್ಟರಿ ನಿಂತು ಹೋಗಿದೆ ಎಂಬ ಸುದ್ದಿ ಕೇಳಿ ಬಂತು. ಆ ನಂತರ ಮಳೆಗಾಲವೂ ಶುರುವಾಯಿತು. ಐಸ್‌ಕ್ರೀಮ್ ಬೇಡವೆನಿಸಿತಾದರೂ ಬಿಲ್ಲಪ್ಪನನ್ನು ನೋಡಬೇಕೆನಿಸುತ್ತಿತ್ತು. ನಾವು ಯಾರಾದರೊಬ್ಬರು ಬಿಲ್ಲಪ್ಪನ ಪಾತ್ರ ವಹಿಸಿ ಅವನಂತೆ ಸ್ಟೈಲ್ ಹೊಡೆಯುತ್ತ ಐಸ್ ಮಾರುವ ಆಟವಾಡುತ್ತಿದ್ದೆವು. ಹಾಗೆ ದಿನ ಉರುಳಿದವು.

ಪುನಃ ಬೇಸಿಗೆ ಬಂದಿತು. ಆದರೆ ಬಿಲ್ಲಪ್ಪನ ಆಗಮನವಿಲ್ಲ. ಅವನ ಜಾತಿಯ ವಿಷಯ ಗೊತ್ತಾಗಿ ಕೆಲಸ ಬಿಟ್ಟನೆಂದೂ.. ಹುಬ್ಬಳ್ಳಿಯಲ್ಲಿ ಐಸ್ ಫ್ಯಾಕ್ಟರಿ ಮಾಡಿದ್ದಾನೆಂದು..ಅವನ ಹೆಂಡತಿ ಓಡಿಹೋದಳೆಂದು..ಆ ಕಾರಣಕ್ಕೆ ಹುಚ್ಚು ಹಿಡಿದು ಕುಳಿತಿದ್ದಾನೆಂದೂ.. ಹೀಗೆ ತಲೆವಾರು ಸುದ್ದಿಗಳು ಕೇಳಿ ಬಂದವು. ನಮಗೆ ಯಾವುದನ್ನು ನಂಬಬೇಕೆಂಬುದು ತಿಳಿಯದಾಯಿತು.

* * *

ಕೇರಿಯ ಆ ತುದಿಯಿಂದ ಲಬೋ ಲಬೋ ಹೊಯ್ಕುಕೊಳ್ಳುತ್ತಿರುವುದು ಕೇಳಿ ಬರತೊಡಗಿತು. ಜನ ಧಾವಂತದಿಂದ ಆ ಕಡೆಗೆ ಓಡಿ ಹೋಗುತ್ತಿದ್ದಾರೆ. ಯಾರೋ  ಹೆಂಡತಿಯನ್ನು ನಶೆಯಲ್ಲಿ ಹೊಡೆಯುತ್ತಿರಬಹುದು ಎನಿಸಿತು. ನಮಗಿದು ನಿತ್ಯದ ಮ್ಯಾಟ್ನೀ ಶೋ. ಜನ  ಗುಂಪುಗೂಡತೊಡಗಿದರು. ಏನೋ ಅನಾಹುತವಾಗಿರುವುದು ಸ್ಪಷ್ಟವಾಯಿತು. ಮುಗಿಲು ಹರಿಯುವಂತಹ ಅಳು. ಗುಂಪು ಸೀಳಿ ಮುಂದೆ ನುಗ್ಗಿ ನೋಡಿದೆ. ಗೆಳೆಯ ಹನುಮನ ಅಪ್ಪನ ಕೈ ಕಾಲು ಮುರಿದು ಗೋಡೆಗೆ ಕೂಡಿಸುತ್ತಿದ್ದಾರೆ. ಒಮ್ಮೆಗೆ ಎದೆ ಜಲ್ಲೆಂದಿತು. ಗುಡಿ ಪೋಳಿಯಲ್ಲಿ ಗುಂಡಾಗೋಲಿ ಆಡುತ್ತಿದ್ದ ಹನುಮಾ ಬಿದ್ದೆನೊ ಸತ್ತೆನೋ ಎನ್ನುವ ಖಬರು ಇಲ್ಲದೆ ಓಡೋಡಿ ಬಂದ. ಬಂದವನೆ ದೊಪ್ಪ ಎಂದು ಅವರಪ್ಪನ ಮೇಲೆ ಬಿದ್ದು ಅಳತೊಡಗಿದ. ಅವರಪ್ಪ ಕಾರಿದ ವಾಂತಿ ಮೈ ಕೈಗೆ ಅಂಟಿಕೊಂಡಿತು. ಗೊಮ್ಮ.. ಎನ್ನುವ ಸೆರೆಯ ವಾಸನೆ ಅಡರಿತು. ಹನುಮ ಎದೆ ಬಡಿದುಕೊಂಡು ಅಳುತ್ತಿದ್ದರೆ ನನ್ನ ಕಣ್ಣು ಸುರಿಯತೊಡಗಿದವು. ಜನ ಸೇರ ತೊಡಗಿದರು. ಹಲಿಗೆ ನುಡಿಯ ತೊಡಗಿದವು.

ಹಲಿಗೆ ಸದ್ದನ್ನು ಸೀಳಿಕೊಂಡು ಆ ಶಬ್ದ ಕೇಳಿ ಬರತೊಡಗಿತು. ಪಾಂವ್..ಪಂವ್.. ಅಯ್ಯೋ ಬಿಲ್ಲಪ್ಪ ಮತ್ತೆ ಬಂದನೆ? ಅದೂ ಇವತ್ತೇ ಬರಬೇಕಿತ್ತೆ? ಕುತೂಹಲದಿಂದ ಅಲ್ಲಿಂದ ಓಡುತ್ತ ಬಂದು ರಸ್ತೆಯ ಆ ಬದಿ ನೋಡುತ್ತ ನಿಂತುಕೊಂಡೆ. ಕೇರಿಯ ಹುಡುಗರು ಜೊತೆಯಾದರು. ಹನುಮನು ಕೂಡಿಕೊಂಡ. ಹೌದು ಐಸ್‌ಕ್ರೀಮ್‌ನವನು. ಆದರೆ ಅವನು ಬಿಲ್ಲಪ್ಪ ಅಲ್ಲ. ಎದೆಯೊಳಗಿನ ದುಃಖ ಕಲಸತೊಡಗಿತು.

ಅವನ ಹತ್ತಿರ ನಡೆದು ಹೋಗಿ ಕೇಳಿದೆವು 'ಯಣ್ಣಾ, ಬಿಲ್ಲಪ್ಪಣ್ಣ ಬರಲಿಲ್ಲನು?'

'ಯಾ ಬಿಲ್ಲಪ್ಪಲೆ.. ಹರೇಮಿ ಮಗಾ ಅಂವಾ ಎಲ್ಲೈ ಅದಾನ ಏನ್ ಕತಿ.' ಅವನ ಮಾತಿನಿಂದ ನಮಗೆ ಸಮಾಧಾನವಾಗಲಿಲ್ಲ.

'ಅಲ್ಲಾ ಯಣ್ಣಾ.. ನಮ್ಮ ಬಿಲ್ಲಪ್ಪಣ್ಣಗ ಏನ ಆಗೇತಿ.. ಎಲ್ಲಿ ಅದಾನ..?' ನಮ್ಮ ವಿಚಾರಣೆ ಅವನಿಗೆ ಸರಿ ಬರಲಿಲ್ಲ.

'ಲೇ ಅದನ್ನ ಕಟಿಗೆಂಡ ನೀವೇನ್ ಮಾಡ್ತೀರೆಪಾ ಮಕ್ಳಾ.. ಅನ್ನುತ್ತ ಐಸ್..ರೀ ಐಸು..' ಕೂಗತೊಡಗಿದ.

ಇನ್ನೊಂದು ಪ್ರಶ್ನೆ ಬಗೆಹರಿಯುವುದಿತ್ತು. ಕೇಳಿದೆ 'ಯಣ್ಣಾ ನೀ ಯಾ ಮಂದಿ?' ಅವನ ಕಣ್ಣು ಅಗಲ ಮಾಡಿ ನೋಡಿದ.

'ನಾ ನಿಮ್ಮಂದಿಯಾಂವಂತೂ ಅಲ್ಲ. ಬೇಕಾದ್ರ ನಾ ನಿಮಗೂ ಐಸ್ ಕೊಡ್ತನೀ..ಆದ್ರ ಬಾಟ್ಲಿ ಕೊಟ್ರ ಮಾತ್ರ..' ಅವನು ವ್ಯಂಗ್ಯವಾಡಿದ. ಅದು ಚುಚ್ಚ ಬೇಕಾದಲ್ಲೆ ಚುಚ್ಚಿತು. ದುಃಖ ಮಡುಗಟ್ಟಿದ್ದ ಎದೆಯೊಳಗೆ ಹೊತ್ತಿ ಕೊಂಡ ಹಾಗಾಯ್ತು. ಥಟ್ಟನೆ ಗುಡಿ ಕಟ್ಟಿ ಮೇಲೆ ಕುಳಿತ ಬಿಲ್ಲಪ್ಪ ಕಣ್ಣೆದುರು ನಿಂತ. ಗಹಗಹಿಸಿ ನಕ್ಕ. ನಾನು ಅಲ್ಲಿಂದ ತಪ್ಪಿಸಿಕೊಳ್ಳುವಂತೆ ಓಡಿದೆ. ಉಳಿದವರೂ ಹಿಂಬಾಲಿಸಿದರು. ಮನೆಯಲ್ಲಿನ ಎಲ್ಲ ಬಾಟಲಿಗಳನ್ನು ಹೊರ ತಂದೆ. ಎದುರಿನ ಗೋಡೆಗೆ ಒಂದೊಂದೇ ಬೀಸಿದೆ. ಪಳ್ಳ..ಪಳ್ಳ... ಸದ್ದು ಕೇಳಿ ಶವ ಸಂಸ್ಕಾರಕ್ಕೆ ಬಂದ ಜನ ಏನೂ ಅರ್ಥವಾಗದವರಂತೆ ನೋಡತೊಡಗಿದರು. ■